ಇರುವ ಟ್ರಾಲಿಯು ನಿಲ್ಲುವುದೋ ಅಲ್ಲೆಲ್ಲ ಯಕ್ಷಗಾನ ಪ್ರದರ್ಶನ ನೀಡುತ್ತಿದ್ದೆವು. 'ತ್ಯಾಗವೀರ ಬಾಹುಬಲಿ' ಪ್ರಸಂಗವನ್ನು ಕೈಗೆತ್ತಿಕೊಂಡು ಪ್ರದರ್ಶನ ನೀಡುತ್ತಿದ್ದೆವು. ಶೀರ್ಷಿಕೆ ಇದೇ ಇದ್ದರೂ ನಾವು ರತ್ನಾಕರವರ್ಣಿಯ 'ಭರತೇಶ ವೈಭವ' ಪ್ರಸಂಗವನ್ನು ಆಡುತ್ತಿದ್ದೆವು. ಆದರೆ ಆ ಪ್ರಸಂಗದ ಕುರಿತೇ ಗೊಂದಲವೊಂದು ಮೂಡಿ, ರತ್ನಾಕರವರ್ಣಿಯ ಆದಿಪುರಾಣದಲ್ಲಿರುವ ಬಾಹುಬಲಿ ಕಥೆಯನ್ನು ಪ್ರದರ್ಶಿಸಬೇಕು ಎಂದು ಜೈನ ಮುಖಂಡರಿಂದ ಸೂಚನೆ ದೊರೆಯಿತು. ಅಂದಿನ ಆ ಗಡಿಬಿಡಿ, ಮಾತುಕತೆ, ಗೊಂದಲ ಗಲಾಟೆಗಳ ಸಂದರ್ಭದಲ್ಲಿ ಈ ಬದಲಾವಣೆಗಳನ್ನು ಮಾಡಲು ಬಹಳವೇನೂ ಸಮಯವಿರಲಿಲ್ಲ. ನನಗೆ ಸರಿಯಾಗಿ ನೆನಪಿದೆ, ಅತ್ತ ಯಕ್ಷಗಾನ ಆಗುತ್ತಿರುವಾಗಲೇ, ಇತ್ತ ಆದಿಪುರಾಣದ ಕಥೆಯನ್ನಾಧರಿಸಿ ಯಕ್ಷಗಾನದ ಪದ್ಯಗಳನ್ನು ಬರೆದುಕೊಡುತ್ತಾ ಹೋದೆ. ಕಡತೋಕ ಮಂಜುನಾಥ ಭಾಗವತರು ಹಾಡುತ್ತಾ ಹೋದರು.

ಒಟ್ಟಿನಲ್ಲಿ ಅಂದಿನ ರಾತ್ರಿಯ ಪ್ರದರ್ಶನವನ್ನು ಅಂತಹ ಒತ್ತಡದಲ್ಲಿ ನಿಭಾಯಿಸಿದ್ದನ್ನು ಹೇಗೆ ಮರೆಯಲಿ? ನಂತರ ಈ ಪ್ರಸಂಗದಲ್ಲಿ ನಾನೇ ಬಾಹುಬಲಿ ಪಾತ್ರವನ್ನು ನಿಭಾಯಿಸಿದೆ ಕೂಡ. ನಿಧಾನವಾಗಿ ಸಾಗುವ ಟ್ರಾಲಿ ಎಲ್ಲಿ ನಿಲ್ಲುವುದೋ ಅಲ್ಲಿಯೇ ಯಕ್ಷಗಾನ ಪ್ರದರ್ಶನ. ಅದೊಂದು ವಿಭಿನ್ನ ಅನುಭವ. ಬಾಹುಬಲಿಯ ಮಹಾನ್ ಮೂರ್ತಿಯನ್ನು ನೋಡಲು ರಸ್ತೆಯ ಇಕ್ಕೆಲಗಳಲ್ಲಿ ಸಾಲುಗಟ್ಟಿ ನಿಲ್ಲುತ್ತಿದ್ದ ಜನರು. 23 ದಿನಗಳ ದೀರ್ಘ ಪ್ರಯಾಣವದು. ಮಹಾಗಣಪತಿ ದೇವರು ಧರ್ಮದೇವತೆಗಳೊಂದಿಗೆ ಈ ವಿಗ್ರಹ ಸಾಗಿಸಿದ್ದೆಂದು ಭಕ್ತರು ಮಾತನಾಡುತ್ತಿದ್ದರು. ಆ ವರ್ಷವಿಡೀ ಜನರ ಬಾಯಲ್ಲಿ ಈ ಪ್ರಯಾಣದ ಮಾತುಕತೆಯೇ. ಭಕ್ತಿಯ ಪರಾಕಾಷ್ಠೆಯಲ್ಲಿ ಒಬ್ಬರು ಬಾಹುಬಲಿಗೆ ಒಂದು ಉಂಗುರವನ್ನು ಸಮರ್ಪಿಸಿದ್ದು ನೆನಪಿದೆ. ಎಲ್ಲವನ್ನೂ ತ್ಯಜಿಸಿ ನಿಂತ ವಿರಾಗಿಗೆ ಈ ಉಂಗುರವೇಕೆ ಕೊಡುತ್ತಿದ್ದಾರೆ ಎಂದು ನಾನು ಅಚ್ಚರಿಪಟ್ಟೆ. ಜನರ ಮನೋಧರ್ಮ ಸದಾ ಹೀಗೆಯೇ ಇರುತ್ತದೆ. ಏನನ್ನು ನಿರಾಕರಿಸಿ ವ್ಯಕ್ತಿಗಳು ಮಹಾನ್ ಪಟ್ಟವನ್ನು ಏರುವರೋ, ಜನರು ಅದನ್ನೇ ಅವರಿಗೆ ಮತ್ತೆ ಮತ್ತೆ ಅಂಟಿಸುವರು. ಏನನ್ನು ಬೋಧಿಸುವರೋ, ಅದರ ವಿರುದ್ಧವೇ ನಡೆಯುವರು. ಕುರುಡು ಅಭಿಮಾನ, ತಪ್ಪು ಗ್ರಹಿಕೆಗಳಿಂದಲೇ ಎಷ್ಟೊಂದು ದೊಂಬಿ ಗಲಾಟೆ, ಸಂಘರ್ಷಗಳು...

◆ **ಯಕ್ಷಗಾನವನ್ನು ಬಾಲ್ಯದಲ್ಲಿಯೇ ಆಯ್ಕೆ ಮಾಡಿಕೊಂಡಿರಿ. ಈ ಕಲೆಯತ್ತ ಆಕರ್ಷಿತರಾಗಲು ಏನು ಕಾರಣ?**

ನಾನು ಹಸಿವಿನ ಬೆನ್ನು ಬಿದ್ದವನು. ಮನುಷ್ಯನಿಗೆ ಎಲ್ಲಕ್ಕಿಂತ ಮೊದಲು ಬೇಕಾದ್ದು ಅನ್ನ. ಹಸಿವೆಯಲ್ಲಿ ನ್ಯಾಯ-ಅನ್ಯಾಯ, ಪಾಪ-ಪುಣ್ಯ, ಸತ್ಯ-ಅಸತ್ಯಗಳ ಪರಿಜ್ಞಾನವೆಲ್ಲಾ ಇರುವುದಿಲ್ಲ. ಒಮ್ಮೆ ಹೊಟ್ಟೆ ತಣ್ಣಗಾದ ಮೇಲೆ ಮನುಷ್ಯ ಎಲ್ಲ ಬಗೆಯ ಗಲಾಟೆಗಳನ್ನು ಶುರು ಹಚ್ಚಿಕೊಳ್ಳುತ್ತಾನೆ. ಧಾರ್ಮಿಕತೆ ಎಂದೋ, ನಾಗರಿಕತೆ ಎಂದೋ, ತಾನು ಒಳ್ಳೆಯವನೆಂದು ತೋರಿಸಿಕೊಳ್ಳುವ ಹತ್ತು ಹಲವು ಅವತಾರಗಳಲ್ಲಿ ಕಾಣಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ನಾನೇನೂ ಯಕ್ಷಗಾನ ಕಲಾವಿದನಾಗಬೇಕೆಂದು ಹೊರಟವನಲ್ಲ. ಹೊಟ್ಟೆ ತುಂಬಿಸಿಕೊಳ್ಳಬೇಕೆಂದು ಅಲೆದಾಡುತ್ತ ಒಂದು ಹೋಟೆಲ್‌ನಲ್ಲಿ ಪ್ಲೇಟು ತೊಳೆಯುವ ಕೆಲಸಕ್ಕೆ ಸೇರಿದ್ದೆ. ಆಗ ಭೇಟಿಯಾದ ಯಕ್ಷಗಾನ ಕಲಾವಿದ ಹೊಸಹಿತ್ಲು ಮಹಾಲಿಂಗ ಭಟ್ಟರು, ಯಕ್ಷಗಾನ ತಿರುಗಾಟಕ್ಕೆ ಹೋದರೆ ಒಂದು ತಿರುಗಾಟದ ಅವಧಿಗೆ - ಅಂದರೆ ದೀಪಾವಳಿಯಿಂದ ವೃಷಭ ಮಾಸದ (ಮೇ ತಿಂಗಳು) ಪತ್ತನಾಜೆಯವರೆಗಿನ ಅವಧಿಗೆ 500 ರೂಪಾಯಿ ಕೊಡುತ್ತಾರೆ ಎಂದುಹೇಳಿದ್ದು ಕೇಳಿ ನನ್ನ ಕಿವಿ ನೆಟ್ಟಗಾಯಿತು.

ನಾನು ಪ್ಲೇಟು ತೊಳೆಯುತ್ತಿದ್ದ ಜಾಗ ದೈಗೋಳಿ ಎಂದು. ಅಲ್ಲಿಂದ ಧರ್ಮಸ್ಥಳಕ್ಕೆ ಹೋದರೆ ಮೇಳಕ್ಕೆ ಸೇರಬಹುದು ಎಂದು ಸ್ವಲ್ಪ ಮಾಹಿತಿ ಸಿಕ್ಕಿತು. ಸೀದಾ ಹೊರಟೆ. ಧರ್ಮಸ್ಥಳ ತಲುಪುವಷ್ಟರಲ್ಲಿ ಮೇಳ ಹೊರಟಾಗಿತ್ತು. ಗುರುಗಳಾದ ಕುರಿಯ ವಿಠಲ ಶಾಸ್ತ್ರಿಗಳು ನನ್ನ ಮನವಿಯನ್ನು ಕೇಳಿ, ಈಗ ನೀನು ಮಿತ್ತನಡ್ಕ ಎಂಬಲ್ಲಿ ಒಂದು ನಾಟ್ಯ ತರಗತಿಗೆ ಸೇರಿಕೊ. ನಂತರ ಯಕ್ಷಗಾನ ಮೇಳ ಸೇರಿಕೊಳ್ಳಬಹುದು ಎಂದು ಸೂಚಿಸಿದರು. ಆ ಶಿಬಿರದಲ್ಲಿ ಇತರ ಯಕ್ಷಗಾನ ಕಲಾವಿದರೂ ಬಂದಿದ್ದರು.

ಯಕ್ಷಗಾನದ ನಾಟ್ಯವಷ್ಟೇ ಅಲ್ಲದೆ, ತಮಿಳುನಾಡಿನ ಪರಮಶಿವನ್ ಎನ್ನುವವರು ಅಲ್ಲಿಗೆ ಬಂದು